ದಿ.16.07.2026

**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಹೊಳಲ್ಕೆರೆ.**

**ಸಿ.ಸಿ.1071/2020**

**ಪ್ರಾಸಾಃ11**

**ಚಾಸಾಃ7**

| | | |
|---|---|---|
| ಸಾಕ್ಷಿಯ ಹೆಸರು | : | ಅಂಜೀನಪ್ಪ |
| ತಂದೆಯ ಹೆಸರು | : | ಕೆಂಗದುರ್ಗಪ್ಪ |
| ವಯಸ್ಸು | : | 58 ವರ್ಷ |
| ಕೆಲಸ | : | ಕೂಲಿ |
| ವಾಸ | : | ಚಿಕ್ಕಜಾಜೂರು ಗ್ರಾಮ |

**ದಿಃ16.07.2026 ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆ ಎ.ಪಿ.ಪಿ.ಯವರಿಂದಃ**

ಆರೋಪಿ ಗೊತ್ತಿಲ್ಲ. ಚಾಸಾ-6 ಗೊತ್ತಿಲ್ಲ.

ಸಾಕ್ಷಿಗೆ ನಿಪಿ-5 ನ್ನು ತೋರಿಸಲಾಗಿ, ಸಾಕ್ಷಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿ ಸಹಿಯನ್ನು ನಿಪಿ-5(ಬಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಸುಮಾರು ವರ್ಷಗಳ ಹಿಂದೆ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ಯಾವ ವಿಚಾರಕ್ಕೆ ಸಹಿ ಮಾಡಿರುತ್ತೇನೆ ಎಂದು ಗೊತ್ತಿಲ್ಲ. ನನ್ನ ಸಮಕ್ಷಮದಲ್ಲಿ ಯಾವುದೇ ಆಭರಣಗಳನ್ನು ಅಮಾನತ್ತು ಪಡಿಸಿಕೊಂಡಿಲ್ಲ. ಈ ಸಂಬಂಧ ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ಪ್ರತಿಕೂಲ ಸಾಕ್ಷಿ ನುಡಿಯುತ್ತಿದ್ದಾರೆ. ಮಾನ್ಯ ಎ.ಪಿ.ಪಿ.ಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)

**ಪಾಟೀ ಸವಾಲು ಎ.ಪಿ.ಪಿ.ಯವರಿಂದಃ**

ದಿನಾಂಕ 04.07.2013 ರಂದು ಹೊಳಲ್ಕೆರೆ ಪೊಲೀಸರು ನನ್ನನ್ನು ಠಾಣೆಗೆ ಕರೆಯಿಸಿ, ಠಾಣೆಯಲ್ಲಿದ್ದ ಆರೋಪಿತನನ್ನು ತೋರಿಸಿರುತ್ತಾರೆ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಸ್ನೇಹಿತನು ಸೇರಿ ಕಳ್ಳತನ ಮಾಡಿ ನನ್ನ ಪಾಲಿಗೆ ಬಂದಿರುವ ಆಭರಣಗಳನ್ನು ಇಟ್ಟಿರುವ ಸ್ಥಳವನ್ನು ತೋರಿಸಿರುತ್ತೇನೆ ಎಂದು ಹೇಳಿರುತ್ತಾನೆ ಎಂದರೆ ಸರಿಯಲ್ಲ. ಆತನು ಪೊಲೀಸರೊಂದಿಗೆ ಸೇರಿ ನಮ್ಮನ್ನು ಶಿವನಿ ಗ್ರಾಮಕ್ಕೆ ಕರೆದುಕೊಂಡು ಹೋಗಿ ತನ್ನ ಮನೆಯ ಪೆಟ್ಟಿಗೆಯೊಳಗೆ ಇಟ್ಟಿದ್ದ ಆಭರಣಗಳನ್ನು ತಂದು ಪೊಲೀಸರ ಮುಂದೆ ಹಾಜರುಪಡಿಸಿರುತ್ತಾನೆ ಎಂದರೆ ಸರಿಯಲ್ಲ.

ದಿ.16.07.2026

ಅವುಗಳನ್ನು ಪೊಲೀಸರು ನನ್ನ ಸಮಕ್ಷಮ ಪಂಚನಾಮೆ ಮಾಡಿ ಅಮಾನತ್ತುಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಈ ವಿಚಾರವಾಗಿ ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಹೇಳಿಕೆಯನ್ನು ತೋರಿಸಿದ್ದು, ಸಾಕ್ಷಿ ನಿರಾಕರಿಸಿದ ಹೇಳಿಕೆಯನ್ನು ನಿಪಿ-9 ಎಂದು ಗುರುತಿಸಲಾಯಿತು.

ನಿಪಿ-5 ರ ಎಲ್ಲಾ ಅಂಶಗಳು ಗೊತ್ತಿದ್ದರೂ ಸಹ ಹಾಗೂ ನಿಪಿ-9 ರಂತೆ ಹೇಳಿಕೆಗೆ ನೀಡಿದ್ದರು ಸಹಾ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಇರುವುದಿಲ್ಲ ಎಂದು ಹೇಳಿರುತ್ತಾರೆ.**

**ಮರು ವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿಯಿದೆ.

ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ.